ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

26

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಮಂಡಲದ ಜಂಟಿ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 28/1/21

---

# ಕಾಟಾಚಾರದ ಶಿಷ್ಟಾಚಾರ

28/1/21

ಸಂ.ಕ. ಸಮಾಚಾರ, ಬೆಂಗಳೂರು

ರಾಜ್ಯ ವಿಧಾನಮಂಡಳದ 2021ನೇ ವರ್ಷದ ಮೊದಲ ಜಂಟಿ ಅಧಿವೇಶನ ಗುರುವಾರ ಆರಂಭವಾಗಲಿದೆ. ಶಾಸನಸಭೆಯ ಶಿಷ್ಟಾಚಾರದಂತೆ ರಾಜ್ಯಪಾಲರ ಭಾಷಣ ಇದರ ಪ್ರಮುಖಾಂಶ. ಇದನ್ನು ಸಿದ್ಧಪಡಿಸಿಕೊಡುವುದೇ ಸರ್ಕಾರ ಎನ್ನುವುದು ವಿಶೇಷ. ಅಂದರೆ ವರ್ಷದ ಯೋಜನೆ, ಅನುಷ್ಠಾನ, ಭವಿಷ್ಯದ ಕಾರ್ಯಕ್ರಮಗಳ ಬಗ್ಗೆ ಉಲ್ಲೇಖಿಸುವುದೇ ಇದರ ಪರಮಗುರಿ.




ಶಾಸನಸಭೆಯ ಸಂಪ್ರದಾಯದಂತೆ ಇದು ಓಕೆ. ಆದರೆ ರಾಜ್ಯಪಾಲರ ಬಾಯಲ್ಲಿ ಸರ್ಕಾರದ ಯೋಜನೆಗಳನ್ನು ಹೇಳಿಸುವುದಷ್ಟೇ ಸಾಧನೆಯೇ ಎನ್ನುವ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಯಾವುದೇ ಪಕ್ಷದ ಸರ್ಕಾರಗಳು ಆಡಳಿತದಲ್ಲಿದ್ದರೂ ಜಂಟಿ ಅಧಿವೇಶನದಲ್ಲಿ ಇದಕ್ಕಿಂತ ಭಿನ್ನವಾದುದೇನನ್ನೂ ನಿರೀಕ್ಷಿಸುವುದು ಅಸಾಧ್ಯ.

ಒಂದೆಡೆ ಶಾಸನಸಭೆಗಳ ಮೂಲ ಉದ್ದೇಶವೇ ವಿಮುಖವಾಗುತ್ತಿರುವ ಇತ್ತೀಚಿನ ದಿನಗಳಲ್ಲಿ ಅಧಿವೇಶನ ನಡೆಯುವುದು ಅಥವಾ ನಡೆಸುವುದು ಕಾಟಾಚಾರಕ್ಕೆ ಎನ್ನುವಂತಾಗಿದೆ. ಇದನ್ನು ಅನುಭವಿ ರಾಜಕಾರಣಿಗಳು ಹಾಗೂ ರಾಜಕೀಯ ಪರಿಣಿತರೂ ಕೂಡಾ ಒಪ್ಪುವಂತಾಗಿರುವುದು ಮಾತ್ರ ಪ್ರಜಾತಂತ್ರ ವ್ಯವಸ್ಥೆಯ ಅಣಕ ಎನ್ನದೇ ವಿಧಿಯಿಲ್ಲ.

ಯಾವುದೇ ಒಂದು ಸರ್ಕಾರ ಒಂದು ವರ್ಷ ಅವಧಿಗೆ ರೂಪಿಸಿದ್ದ ಕಾರ್ಯಕ್ರಮಗಳೇನು? ಅವು ಎಷ್ಟರಮಟ್ಟಿಗೆ ಸಫಲವಾಗಿವೆ ಎನ್ನುವುದು ರಾಜ್ಯಪಾಲರ ಭಾಷಣದಲ್ಲಿ ಅಡಕವಾಗಿರುತ್ತದೆ. ಇದಕ್ಕೂ ಮುನ್ನ ಇಲಾಖೆಗಳ ಮಾಹಿತಿ ಪಡೆದು ಸಚಿವಸಂಪುಟದಲ್ಲಿ ಪರಾಮರ್ಶಿಸಿದ ಬಳಿಕವೇ ಅದು ಭಾಷಣ ರೂಪ ಪಡೆಯುತ್ತದೆ. ಯಾವುದೇ ವೈಫಲ್ಯಗಳು ಇದರ ಭಾಗವಾಗಿರುವುದಿಲ್ಲ ಎಂಬುದು ಉಲ್ಲೇಖಾರ್ಹ. ಅಂದರೆ ಸರ್ಕಾರಕ್ಕೆ ಪರೋಕ್ಷವಾಗಿ ರಾಜ್ಯಪಾಲರು ಬಹುಪರಾಕ್ ಹೇಳುವುದಕ್ಕಷ್ಟೇ ಸೀಮಿತ.

ಬಳಿಕ ರಾಜ್ಯಪಾಲರ ಭಾಷಣದ ಮೇಲೆ ಸದನಗಳಲ್ಲಿ ಸುದೀರ್ಘ ಚರ್ಚೆ ನಡೆಸಿ ಅಂತಿಮವಾಗಿ ವಂದನಾ ನಿರ್ಣಯ ರಾಜ್ಯಪಾಲರಿಗೆ ರವಾನೆಯಾಗುತ್ತದೆ. ಅಂದರೆ ಸರ್ಕಾರದ ನಡವಳಿಕೆ ಮೇಲೆ ರಾಜ್ಯಾಂಗದ ನಿಯಂತ್ರಣ ಎನ್ನುವುದರ ಸೂಚಕ. ಇದಿಷ್ಟೇ ಸಾಕೇ? ಸರ್ಕಾರದ ಸಾಧನೆಗಳ ಹಿನ್ನೋಟ-ಮುನ್ನೋಟಗಳು ಪ್ರಸ್ತಾಪವಾಗುವುದು ವಿರೋಧಪಕ್ಷಗಳ ಟೀಕೆ ಆಡಳಿತಪಕ್ಷದ ಸಮರ್ಥನೆಗೆ ಜಂಟಿ ಅಧಿವೇಶನ ಸಾಕ್ಷಿಯಾಗುತ್ತದೆ.

ಸಂವಿಧಾನಾತ್ಮಕ ಹುದ್ದೆ ಹೊಣೆಯ ರಾಜ್ಯಪಾಲರು ಸರ್ಕಾರಕ್ಕೆ ಚಾಟಿ ಬೀಸುವ ವ್ಯವಸ್ಥೆ ರೂಢಿಯಾಗಬೇಕಿದೆ. ಸರ್ಕಾರಗಳು ವಾಸ್ತವ ಪರಿಸ್ಥಿತಿಯನ್ನು ಶಾಸನಸಭೆ ಮುಂದಿಡುವ ಪ್ರಾಮಾಣಿಕತೆ ಮತ್ತು ನಿರ್ಭೀತ ನಡವಳಿಕೆ ತೋರಬೇಕಾಗುತ್ತದೆ. ಪ್ರತಿಪಕ್ಷಗಳು ಕೂಡಾ ವಿರೋಧಕ್ಕೆಂದೇ ಪ್ರತಿರೋಧ ತೋರದೆ ನಾಡಜನರ ಹಿತದೃಷ್ಟಿಯಿಂದ ವಸ್ತುನಿಷ್ಠ ನಿಲುವು ಪ್ರದರ್ಶಿಸಬೇಕು. ಆಗ ಮಾತ್ರ ಶಾಸನಸಭೆಯ ಬಗೆಗಿನ ಗೌರವ ಹೆಚ್ಚುವುದರ ಜೊತೆಗೆ ಕಾಟಾಚಾರದ ಅಧಿವೇಶನ ಎಂಬ ಹಣೆಪಟ್ಟಿಯನ್ನೂ ಕಳಚಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಜನಹಿತ ಚಿಂತನೆ ಸಾಕಾರವಾಗಬೇಕಿದೆ.

> “ರಾಜ್ಯಪಾಲರ ಭಾಷಣದಲ್ಲಿ ವಾರ್ಷಿಕ ಹಿನ್ನೋಟದ ಜೊತೆಗೆ ಸರ್ಕಾರದ ವೈಫಲ್ಯಗಳ ಟೀಕೆಯೂ ಒಳಗೊಳ್ಳಬೇಕು. ಆಗ ಮಾತ್ರ ಸಂವಿಧಾನ, ಪ್ರಜಾಪ್ರಭುತ್ವ, ಸಂಸದೀಯ ವ್ಯವಸ್ಥೆಗಳಿಗೆ ಗೌರವ ಬರಲು ಸಾಧ್ಯವಿದೆ.
>
> ■ **ಟಿ.ಬಿ.ಜಯಚಂದ್ರ**
> ಮಾಜಿ ಕಾನೂನು ಸಚಿವ

- **ರಾಜ್ಯಪಾಲರ ಭಾಷಣ ಸರ್ಕಾರದ ಸಿದ್ಧೌಷಧ**
- **ಶಿಷ್ಟಾಚಾರ-ಸಂಪ್ರದಾಯಕ್ಕಷ್ಟೇ ಸೀಮಿತವೇ**
- **ಸರ್ಕಾರದ ಯೋಜನೆಗಳಿಗೆ ಬಹುಪರಾಕ್**